


### ಉಪಯುಕ್ತ ಮಾಹಿತಿ

ಕ್ರೆಡಿಟ್ ಕಾರ್ಡ್ ಬಗ್ಗೆ ಎಂ.ಎಚ್.ಅರ್ಶದ್ ಹುಸೇನ್ ಅವರು ಮುಖಪುಟ ಲೇಖನದಲ್ಲಿ ನೀಡಿರುವ ಮಾಹಿತಿಗಳು ಉಪಯುಕ್ತವಾಗಿವೆ.

ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ವೈ.ಎಂ.ಚಂದ್ರಶೇಖರ್, ಸಿದ್ದಾಪುರ/ ರುದ್ರೇಶ್ ಅದರಂಗಿ, ಕೋಲಾರ, ಬೇಲೂರು ದ.ಶಂ.ಪ್ರಕಾಶ್, ಮೈಸೂರು

### ಬಡ್ಡಿ-ಚಕ್ರಬಡ್ಡಿ!

ಕ್ರೆಡಿಟ್ ಕಾರ್ಡ್ ಎಂದರೆ– ನಮ್ಮ ಹಣವನ್ನು ಬ್ಯಾಂಕಿನಲ್ಲಿಟ್ಟು ಶೇಕಡಾ 5 ರಷ್ಟು ಸರಳ ಬಡ್ಡಿಯನ್ನು ಪಡೆಯುವುದರ ಬದಲು, ಅನಗತ್ಯವಾಗಿ ಅಂತಹ ಹಣವನ್ನು ಸಾಲವಾಗಿ ಪಡೆದು ಶೇಕಡಾ 30 ರಷ್ಟು ಚಕ್ರ ಬಡ್ಡಿಯನ್ನು ನೀಡಿ ಆನಂದಿಸುವುದು!

-ಡಾ. ಕೆ.ಕೆ.ಜಯಚಂದ್ರ ಗುಪ್ತ, ಹಾಸನ

### ಸೂಕ್ತ ಸಮಯದ ಬರಹ

ಸೀತಾ ಕೇಶವರ 'ಮುಕ್ತಿನಾಥ ದರ್ಶನ' ಲೇಖನ ದೀಪಗಳ ಹಬ್ಬಕ್ಕೆ ಸರಿಯಾಗಿ ಕೈ ಸೇರಿ ಓದುಗರೂ ದರ್ಶನ ಪಡೆದ ಹಾಗಾಯ್ತು.

-ಎಂ.ಎಲ್.ಲಕ್ಷ್ಮಣ್ ರಾವ್, ದಾವಣಗೆರೆ

### ಭಾರತಕ್ಕೇ ಗೌರವ

'ಕೆನ್ನಾಯಿಯ ಕುಟುಂಬ ಕಥನ' ಕೆ.ಪುಟ್ಟಸ್ವಾಮಿ ಬರಹ ಓದಿ ಹೆಮ್ಮೆಯಾಯಿತು. ಕನ್ನಡಿಗರಾದ ಕೃಪಾಕರ ಮತ್ತು ಸೇನಾನಿ ಜೋಡಿಯ ಸಾಹಸದಲ್ಲಿ ತಯಾರಾದ 'ದಿ ಪ್ಯಾಕ್' ಚಿತ್ರ ವೈಲ್ಡ್ ಸ್ಕ್ರೀನ್ ಫೆಸ್ಟಿವಲ್–2010 ರಲ್ಲಿ ಪ್ರಶಸ್ತಿ ಗಳಿಸಿದ್ದು– ಬರೀ ಕರ್ನಾಟಕಕ್ಕೆ ಮಾತ್ರವಲ್ಲ, ಭಾರತಕ್ಕೇ ಸಂದ ಗೌರವ.

-ಪಿ.ಎಸ್.ಶ್ರೀವತ್ಸ, ಬೆಂಗಳೂರು,
ಕಾಳೇಹುಂಡಿ ಶಿವಕುಮಾರ್, ಮೈಸೂರು

### ಕನ್ನಡಿಗರ ಮಾಹಿತಿ

'ಕನ್ನಡದ ಮೊದಲಿಗರು' ಉಪಯುಕ್ತ ಲೇಖನ. ಸಂಗ್ರಹಯೋಗ್ಯ. ಆದರೆ ಇನ್ನೂ ಕೆಲವು ಬಿಟ್ಟು ಹೋಗಿವೆ.

-ನಾಗರಾಜ ಬಣಕಾರ, ಕೊಟ್ಟೂರು
ಕೊಹಿಮ, ಬಸರಕೋಡು

### ಕಣವಿ ಕಾವ್ಯ ಪುರಸ್ಕಾರ

ಹಾನಗಲ್ಲದ ಕನ್ನಡ ಯುವಜನ ಕ್ರಿಯಾ ಸಮಿತಿಯು 'ಕಣವಿ ಕಾವ್ಯ ಪುರಸ್ಕಾರ'ಕ್ಕಾಗಿ ಯುವ ಕವಿಗಳಿಂದ ಕವನ ಸಂಕಲನಗಳನ್ನು ಆಹ್ವಾನಿಸಿದೆ.

2009 ಮತ್ತು 2010ರಲ್ಲಿ ಪ್ರಕಟಗೊಂಡ ಯುವ ಕವಿಗಳ ಮೊತ್ತಮೊದಲ ಕವನ ಸಂಕಲನಕ್ಕೆ ಈ ಪುರಸ್ಕಾರ ನೀಡಲಾಗುತ್ತದೆ. ಪ್ರಶಸ್ತಿಯ ಮೊತ್ತ ರೂ. 5000/– ನಗದು. 40 ವರ್ಷ ವಯೋಮಾನದೊಳಗಿನ ಆಸಕ್ತ ಕವಿಗಳು ತಮ್ಮ ಕವನ ಸಂಕಲನವನ್ನು (3 ಪ್ರತಿ) ಡಿಸೆಂಬರ್ 1ರ ಒಳಗೆ: ವಿಜಯಕಾಂತ ಪಾಟೀಲ, ಪ್ರಧಾನ ಸಂಚಾಲಕ, ಕನ್ನಡ ಯುವಜನ ಕ್ರಿಯಾ ಸಮಿತಿ, ಚಿಕ್ಕಾಂಶಿ ಹೊಸೂರು–581104, ಹಾನಗಲ್ಲ ತಾಲೂಕು/ ಹಾವೇರಿ ಜಿಲ್ಲೆ– ಇವರಿಗೆ ಕಳುಹಿಸಿಕೊಡಬೇಕು. ಹೆಚ್ಚಿನ ಮಾಹಿತಿಗೆ: 9731717430. ಈ ಚರವಾಣಿಗೆ ಸಂಪರ್ಕಿಸಿರಿ.

### 'ಸಮರ್ಥರು' ಉತ್ತಮ ಆರಂಭ

'ಸುಧಾ' ವಾರಪತ್ರಿಕೆಯಲ್ಲಿ ಪ್ರಕಟವಾಗುವ ಧಾರಾವಾಹಿಗಳು ಆಕರ್ಷಕವಾಗಿವೆ, 'ನಿರ್ಮಲಾ ವಿ. ಬೀಳಗಿ'ಯವರ 'ನೀರ ಮೇಲಣ ಗುಳ್ಳೆ' ಸುಂದರವಾಗಿತ್ತು. ಇಷ್ಟು ಬೇಗ ಮುಗಿದಿದ್ದು ಬೇಸರದ ಸಂಗತಿ. ಆದರೆ ಇದೀಗ ಬರುತ್ತಿರುವ 'ಸಮರ್ಥರು' ಕುತೂಹಲ ಹುಟ್ಟಿಸಿದೆ.

-ಆರ್.ಅರ್ಪಿತಾ, ಉಜಿರೆ
ಆರ್.ಬಸವರಾಜ, ದಾವಣಗೆರೆ

### ಬಹಳ ದಿನಗಳ ನಂತರದ ಖುಷಿ

ಜನಪ್ರಿಯ ಕಾದಂಬರಿಕಾರ ಬಿ.ಎಲ್.ವೇಣು ಅವರ ಹೊಸ ಧಾರಾವಾಹಿಯನ್ನು ಬಹಳ ದಿನಗಳ ನಂತರ ನೋಡಿ ಖುಷಿಯಾಯಿತು.

-ಕೆ.ಎಚ್.ಓಬಳೇಶ್, ಆರ್.ತಿಪ್ಪೇಸ್ವಾಮಿ,
ಅಹೋಬಲ ನಾಯಕ, ಮೊಳಕಾಲ್ಮೂರು,
ಬಿ.ಎಸ್.ಚಂದ್ರಶೇಖರ, ಆರ್.ಷಣ್ಮುಖಪ್ಪ, ಗಿರಿಜ,
ಪಾರ್ವತಮ್ಮ, ಚಿತ್ರದುರ್ಗ,
ಎಸ್.ಬಿ.ಜಾಡರ, ಹುಬ್ಬಳ್ಳಿ

### ವೇಣು ಮನೋಧಾರ್ಡ್ಯತೆ

'ಸಮರ್ಥರು' ಚೆನ್ನಾಗಿ ಆರಂಭವಾಗಿದೆ. ಬಲಗೈ ಕೈ ಕೊಟ್ಟರೂ ಎಡಗೈಯಲ್ಲೇ ಬರೆಯುತ್ತಿದ್ದ ವೇಣು ಅವರ ಮನೋಧಾರ್ಡ್ಯತೆ ಗೌರವಕ್ಕೆ ಪಾತ್ರವಾದುದು. ಅವರ ಸಾಹಿತ್ಯ ಸೇವೆ ಅನುಪಮ.

-ಎ.ಕೆ. ಪಟ್ಟಾಭಿ, ಬೆಂಗಳೂರು

## 'ಸುಧಾ'ಳಿಗಾಗಿ ನನ್ನ ಆಯಸ್ಸು ಹೆಚ್ಚಲಿ

'ಸುಧಾ' ಪ್ರಕಟಗೊಂಡ ಮೊದಲ ಸಂಚಿಕೆಯಿಂದ ಇಂದಿನವರೆಗೂ ತಪ್ಪದೇ ಓದುತ್ತ ಬಂದಿದ್ದೇನೆ. ದೂರದ ಮುಂಬಯಿ, ದೆಹಲಿ, ಹೈದ್ರಾಬಾದಿನಲ್ಲಿದ್ದಾಗ 'ಸುಧಾ' ಸಿಗದೆ ಚಡಪಡಿಸಿದ್ದೇನೆ. 1970 ರಲ್ಲಿ ರಾಯಚೂರಿನಿಂದ ಕೊಪ್ಪಳ ತಾಲೂಕಿನ ಹಿರೇಸಿಂದೋಗಿ ಎಂಬ ಕುಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ವರ್ಗವಾಗಿ ಹೋದೆ. ಒಂದೋ–ಎರಡು ಖಾಸಗಿ ಬಸ್‌ಗಳನ್ನು ಬಿಟ್ಟರೆ ಕೊಪ್ಪಳಕ್ಕೆ ಹೋಗಿ ಬರಲು ಯಾವುದೇ ಸೌಕರ್ಯವಿರಲಿಲ್ಲ. ಗುರುವಾರ ಬಂದರೆ 'ಸುಧಾ' ನೋಡುವ ಓದುವ ತವಕ ಹೆಚ್ಚಾಗುತ್ತಿತ್ತು. ಹಳ್ಳಿ ಊರಾದುದರಿಂದ ದಿನಪತ್ರಿಕೆಯಾಗಲಿ, ವಾರಪತ್ರಿಕೆಗಳಾಗಲಿ ಅಲ್ಲಿ ಸಿಗುತ್ತಿರಲಿಲ್ಲ. ಆಗ 5 ಕಿ.ಮಿ. ದೂರವಿದ್ದ ಕೊಪ್ಪಳಕ್ಕೆ ನಡೆದುಕೊಂಡೇ ಹೋಗಿ 'ಸುಧಾ' ಖರೀದಿಸುತ್ತಿದ್ದೆ. ನಾನು ಕಳಿಸಿದ ಒಂದು ಪ್ರಶ್ನೆ 'ಸುಧಾ' (10–3–1978) ದಲ್ಲಿ ವ್ಯಂಗ್ಯಚಿತ್ರದೊಂದಿಗೆ ಪ್ರಕಟಗೊಂಡಿತ್ತು. ನೋಡಿ ಸಂತೋಷವಾಯಿತು. ಅದಕ್ಕಿಂತಲೂ ಹೆಚ್ಚು ಸಂತೋಷವಾದುದ್ದೆಂದರೆ ಇದೇ ನನ್ನ ಪ್ರಶ್ನೆಯಿಂದ ಸ್ಫೂರ್ತಿ ಪಡೆದಂತೆ ಭ್ರಮರ ಇವರ 'ವಿಚಾರ ರಶ್ಮಿ' ವಿಭಾಗದಲ್ಲಿ (ಸುಧಾ 9–4–1978) 'ನಿದ್ರಾಭಂಗ' ಎಂಬ ಶೀರ್ಷಿಕೆ ಅಡಿ ಪ್ರಕಟಗೊಂಡಿತ್ತು. 10 ವರ್ಷದಿಂದ ನಿವೃತ್ತಿ ಜೀವನ ಕಳೆಯುತ್ತಿದ್ದೇನೆ. ಈಗಲೂ ಗುರುವಾರ ಬರುವ ಹಾದಿ ಕಾಯುತ್ತೇನೆ.

ಈಗ ಅನಾರೋಗ್ಯ ಪೀಡಿತನಾಗಿ ಹಾಸಿಗೆ ಹಿಡಿದಿದ್ದರೂ, ಇನ್ನೂ ಹತ್ತಾರು ವರ್ಷ 'ಸುಧಾ' ಓದಲೆಂದೇ ಭಗವಂತ ನನಗೆ ಆಯುಷ್ಯಕೊಟ್ಟು ನನ್ನ ಆರೋಗ್ಯದಲ್ಲಿ ಸುಧಾರಣೆ ತರಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇನೆ.

-ಎಚ್.ಆರ್. ದೇಸಾಯಿ, ರಾಯಚೂರು

ಸಹಿಸಲಸಾಧ್ಯವಾದ
ಸಂದಿ ನೋವೆ?
...ಮೂಲದಿಂದಲೆ ಔಷದೋಪಚಾರ ಮಾಡಿ.



ಸಾಧಾರಣ ನೋವಿನ ಎಣ್ಣೆ ಇಲ್ಲವೆ ಮೂಲಾಮು, ಮಾತ್ರೆಗಳಿಂದ ಕೇವಲ ಸಾಂದರ್ಭಿಕ ಹಾಗೂ ಕ್ಷಣಿಕ ಗುಣ ಕಾಣಬಹುದು.

ಕೇವಲ ಬೈದ್ಯನಾಥ್ ರೂಮಾರ್ಥೋ ಗೋಲ್ಡ್ ಪ್ಲಸ್ ಒಂದು ಪ್ರಯೋಗಿಸಲ್ಪಟ್ಟ ಹಾಗೂ ಪ್ರಮಾಣೀಕೃತ ಆಯುರ್ವೇದೀಯ ತಯಾರಿಕೆಯಾಗಿದ್ದು ಇದರಲ್ಲಿರುವ ಸ್ವರ್ಣಭಸ್ಮ ಮತ್ತು ಸಲಾಯಿ ಗುಗ್ಗುಲು ನೋವು ನಿವಾರಣೆ ಮತ್ತು ಕಾಯಿಲೆಯು ಉಲ್ಬಣಗೊಳ್ಳದಂತೆ ತಡೆಯುವುದರೊಂದಿಗೆ ಈ ತೊಂದರೆಗೆ ಕಾರಣವನ್ನು ಮೂಲದಿಂದಲೇ ನಿವಾರಿಸಿ ಸಂಧಿವಾತ, ಆಮವಾತ, ಸೈಯಾಟಿಕ, ವೆರಿಕೋಸ್-ವೆಯಿನ್ಸ್, ಸ್ಪಾಂಡಿಲೈಟಿಸ್, ಮಾಂಸಖಂಡಗಳ ನೋವು ನಿವಾರಣೆಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುತ್ತದೆ.

ಬೈದ್ಯನಾಥ್
ರೂಮಾರ್ಥೋ ಗೋಲ್ಡ್ ಪ್ಲಸ್
ರ್ಹ್ಯೂಮ ಆಯಿಲ್
ನ್ಯೂ ಸ್ಟ್ರಾಂಗ್ ಫಾರ್ಮುಲಾ
ಶೀಘ್ರ ಉಪಶಮನ, ಸಂಪೂರ್ಣ ನಿವಾರಣೆ.